12	ಚಿತ್ರದುರ್ಗ	56755	23967	0	0
13	ಬಿಜಾಪುರ	29324	34995	0	0
14	ಬಳ್ಳಾರಿ	0	0	0	0
15	ಧಾರವಾಡ	0	0	0	0
16	ಶಿವಮೊಗ್ಗ	52128	33977	0	0
17	ಶಿರಸಿ	142041	134391	0	0
18	ದಾವಣಗೆರೆ	6950	14590	0	0
	ಒಟ್ಟು	**9604244**	**18058568**	**519153**	**102994**

ರೈತರ ಚೀನಾ ಅಧ್ಯಯನ ಪ್ರವಾಸ

509 (1003) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಚೀನಾ ಅಧ್ಯಯನ ಪ್ರವಾಸದ ಸೌಲಭ್ಯಗಳನ್ನು ಎಷ್ಟು ಜನ ರೈತರಿಗೆ ಒದಗಿಸಿಕೊಡಲಾಗಿದೆ; ಅಧ್ಯಯನ ಪ್ರವಾಸದ ಉಪಯುಕ್ತತೆಯನ್ನು ಸರ್ಕಾರ ಕೃಷಿ ಕ್ಷೇತ್ರದಲ್ಲಿ ಯಾವ ರೀತಿಯಲ್ಲಿ ಬಳಸಿಕೊಳ್ಳಲು ಉದ್ದೇಶಿಸಿದೆ;

ಆ) ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಸುಧಾರಣೆಗಾಗಿ ಸರ್ಕಾರದ ವಿವಿಧ ಪ್ರಗತಿ ಪರ ಯೋಜನೆಗಳೇನು;

ಇ) ಪ್ರಕೃತಿ ವಿಕೋಪ ಮುಂತಾದ ಆಪತ್ತುಗಳಿಂದ ರೈತರನ್ನು ಸಂರಕ್ಷಿಸಲು ಸರ್ಕಾರದ ಮುಂಜಾಗರುಕತಾ ಕ್ರಮಗಳೇನು?

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) :

ಅ) ರೈತರ ಚೀನಾ ಅಧ್ಯಯನ ಪ್ರವಾಸದ ಸೌಲಭ್ಯಗಳನ್ನು 633 ಜನ ರೈತರಿಗೆ ಒದಗಿಸಿಕೊಡಲಾಗಿದೆ. ರೈತರಿಗೆ ಚೀನಾ ದೇಶದಲ್ಲಿನ ಕೃಷಿ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸಲಾಗಿರುತ್ತದೆ. ಸದರಿ ತಾಂತ್ರಿಕತೆಗಳನ್ನು ತಮ್ಮ ಕ್ಷೇತ್ರಗಳಲ್ಲಿ ಅಳವಡಿಸಿ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿರುವುದರಿಂದ ಸರ್ಕಾರವು ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಅಧ್ಯಯನ ಪ್ರವಾಸದ ಉಪಯುಕ್ತತೆಯನ್ನು ಬಳಸಕೊಳ್ಳಲು ಉದ್ದೇಶಿಸಿದೆ.

ಆ) ಅನುಬಂಧದಲ್ಲಿ ನೀಡಲಾಗಿದೆ.

ಇ) ಅತಿವೃಷ್ಟಿ/ಅನಾವೃಷ್ಟಿ ಮುಂತಾದ ಪ್ರಕೃತಿ ಆಪತ್ತುಗಳಿಂದ ರೈತರನ್ನು ಸಂರಕ್ಷಿಸಲು ಕೃಷಿ ಇಲಾಖೆ ಹಾಗೂ ಕೃಷಿ ವಿಶ್ವವಿದ್ಯಾಲಯಗಳು "ಪರ್ಯಾಯ ಬೆಳೆ ಕಾರ್ಯಕ್ರಮ"ವನ್ನು ರೂಪಿಸಿ ಅನುಷ್ಠಾನ ಗೊಳಿಸಲಾಗುತ್ತಿದೆ.

ಅನುಬಂಧ

ಕೃಷಿ ಕ್ಷೇತ್ರದಲ್ಲಿ ಹೆಚ್ಚು ಸುಧಾರಣೆಗಾಗಿ ಕೃಷಿ ಇಲಾಖೆಯ ವತಿಯಿಂದ ರಾಜ್ಯದಲ್ಲಿ ಹಮ್ಮಿಕೊಳ್ಳಲಾದ ವಿವಿಧ ಪ್ರಗತಿಪರ ಯೋಜನೆಗಳ ವಿವರಗಳು

1. **ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ :**

ಈ ಯೋಜನೆಯಡಿ ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ವರ್ಗದ ರೈತರಿಗೆ ರಿಯಾಯಿತಿ ದರದಲ್ಲಿ ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ ಬೆಳೆಗಳ ಪ್ರಮಾಣೀತ/ನೀಜಚೀಟಿ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗುವುದು.

2. **ಮಣ್ಣು ಆರೋಗ್ಯ ಕೇಂದ್ರಗಳು :**

ಈ ಯೋಜನೆಯಡಿ ಜೈವಿಕ ಗೊಬ್ಬರಗಳ ಉತ್ಪಾದನೆ ಮಾಡಿ ರೈತರಿಗೆ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ ಹಾಗೂ ಮಣ್ಣು ಪರೀಕ್ಷೆ ಮಾಡಿ ಮಣ್ಣು ಆರೋಗ್ಯ ಚೀಟಿಗಳನ್ನು ನೀಡಲಾಗುತ್ತಿದೆ.

3. **ಕೀಟನಾಶಕ ನಿಯಂತ್ರಣ ಪ್ರಯೋಗಶಾಲೆ :**

ಈ ಯೋಜನೆಯಡಿ ರೈತರಿಗೆ ರಿಯಾಯಿತಿ ದರದಲ್ಲಿ ಜೈವಿಕ ಪೀಡೆನಾಶಕಗಳು, ಜೈವಿಕ ನಿಯಂತ್ರಣಾಕಾರಗಳು, ವೈಜ್ಞಾನಿಕ ಧಾನ್ಯ ಸಂಗ್ರಹಣೆಗಾಗಿ ಸುಧಾರಿತ ಪೆಟ್ಟಿಗೆಗಳ ವಿತರಣೆ, ರಾಸಾಯನಿಕ ಪೀಡೆನಾಶಕಗಳ ವಿತರಣೆ ಮಾಡಲಾಗುತ್ತಿದೆ ಹಾಗೂ ಗುಣ ನಿಯಂತ್ರಣದ ಬಗ್ಗೆ ವಿಸ್ತರಣಾ ಸಿಬ್ಬಂದಿ ಹಾಗೂ ರೈತರಿಗೆ ತರಬೇತಿ ನೀಡಲಾಗುತ್ತಿದೆ.

4. ಹತ್ತಿಯ ಬಗ್ಗೆ ತಾಂತ್ರಿಕ ಆಯೋಗದಡಿ ಕಿರು ಆಯೋಗ -II- (ಕೇಂದ್ರ ಪುರಸ್ಕೃತ) :

ಈ ಯೋಜನೆಯಡಿ ಇಲಾಖಾ ಅಧಿಕಾರಿಗಳಿಗೆ ಋತುಮಾನ ಪರ್ಯಂತ ತರಬೇತಿ ಕಾರ್ಯಕ್ರಮ, ವಿಸ್ತರಣಾ ಕಾರ್ಯಕರ್ತರಿಗೆ / ಸರ್ಕಾರೇತರ ಸಂಘ ಸಂಸ್ಥೆ/ ಅಧಿಕಾರಿಗಳಿಗೆ ರಾಜ್ಯಮಟ್ಟದ ತರಬೇತಿ, ರೈತರ ಕ್ಷೇತ್ರ ಪಾಠಶಾಲೆ, ಪರತಂತ್ರ ಜೀವಿ ಪ್ರಯೋಗಶಾಲೆಗಳ ನಿರ್ಮಾಣ ಹಾಗೂ ಬಲವರ್ಧನೆ, ಮೂಲ ಬೀಜೋತ್ಪಾದನಾ ಕಾರ್ಯಕ್ರಮ, ದೃಢೀಕೃತ ಬಿತ್ತನೆ ಬೀಜ ಉತ್ಪಾದನಾ ಕಾರ್ಯಕ್ರಮ, ಬೀಜೋಪಚಾರ ಕಾರ್ಯಕ್ರಮಗಳು, ಸಸ್ಯ ಸಂರಕ್ಷಣಾ ಕಾರ್ಯಕ್ರಮಗಳು ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳು, ನೂತನ ತಾಂತ್ರಿಕತೆ ಅಳವಡಿಕೆ ಪ್ರಾತ್ಯಕ್ಷಿಕತೆ, ರೈತರಿಗೆ ರಿಯಾಯಿತಿ ದರದಲ್ಲಿ ತಳಿವರ್ಧಕ ಬೀಜಗಳು ಹಾಗೂ ದೃಢೀಕೃತ ಬಿತ್ತನೆ ಬೀಜಗಳ ವಿತರಣೆ, ನೀರು ಸಂರಕ್ಷಣಾ ಉಪಕರಣಗಳ ವಿತರಣೆ, ಆಧುನಿಕ ಕೃಷಿ ಉಪಕರಣಗಳ ವಿತರಣೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

5. ವಿಸ್ತೃತ ನೀರಾವರಿ ಕಾರ್ಯಕ್ರಮ (ಕೇಂದ್ರ ಪುರಸ್ಕೃತ) :

ಈ ಯೋಜನೆಯಡಿ ರೈತರಿಗೆ ರಿಯಾಯಿತಿ ದರದಲ್ಲಿ ಹನಿ ನೀರಾವರಿ ಹಾಗೂ ತುಂತುರು ನೀರಾವರಿ/ರೇನ್‌ಗನ್ ಘಟಕಗಳ ವಿತರಣೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

6. ಬೇಸಾಯ ಸಂಬಂಧಿತ ಚಟುವಟಿಕೆಗಳು :

ಈ ಯೋಜನೆಯಡಿ ರೈತ ಸಮುದಾಯಕ್ಕೆ ಸುಧಾರಿತ ತಾಂತ್ರಿಕತೆಗಳನ್ನು ತಲುಪಿಸಲು ಸ್ಥಳೀಯ ಜಾತ್ರೆಗಳು ಮತ್ತು ವಿಶೇಷ ಸಂದರ್ಭಗಳಲ್ಲಿ ಇಲಾಖಾ ಚಟುವಟಿಕೆಗಳನ್ನು ಕುರಿತು ಪರಿಣಾಮ ಕಾರಿಯಾಗಿ ವಸ್ತು ಪ್ರದರ್ಶನಗಳನ್ನು ರಾಷ್ಟ್ರ, ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಏರ್ಪಡಿಸಲಾಗುತ್ತಿದೆ.

7. **ಎಣ್ಣೆ ಕಾಳು, ದ್ವಿದಳಧಾನ್ಯ ಹಾಗೂ ಮುಸುಕಿನ ಜೋಳ ಉತ್ಪಾದನಾ ಕಾರ್ಯಕ್ರಮ–ಕೇಂದ್ರ ಪುರಸ್ಕೃತ**

ಈ ಯೋಜನೆಯಡಿ ಮೂಲ ಬೀಜ ಉತ್ಪಾದನೆ, ತಳಿವರ್ಧಕ ಬೀಜ ಖರೀದಿ, ಬೀಜ ಗ್ರಾಮ ಯೋಜನೆ, ಪ್ರಮಾಣಿತ ಬೀಜ ವಿತರಣೆ, ನೂತನ ತಾಂತ್ರಿಕತೆ ಅಳವಡಿಕೆ ಪ್ರಾತ್ಯಕ್ಷಿಕೆಗಳು, ಸಸ್ಯ ಸಂರಕ್ಷಣಾ ಉಪಕರಣಗಳ ಮತ್ತು ಔಷಧಿಗಳ ವಿತರಣೆ ಮಾಡಲಾಗುತ್ತಿದೆ. ರೈಜೋಬಿಯಂ ಹಾಗೂ ಪಿ.ಎಸ್.ಬಿ ಜೀವಾಣುಗಳ ವಿತರಣೆ, ರೈತರಿಗೆ ತರಬೇತಿ, ವಿಸ್ತರಣಾಧಿಕಾರಿಗಳಿಗೆ ತರಬೇತಿ, ಲಘು ಪೋಷಕಾಂಶಗಳ ವಿತರಣೆ ಹಾಗೂ ರೈತರ ಪ್ರವಾಸ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

8. **ಇತರೆ ಕೃಷಿ ಯೋಜನೆಗಳು :**

ಈ ಯೋಜನೆಯಡಿ ಕೃಷಿ ಪ್ರಶಸ್ತಿ (ರೈತರಿಗೆ ಉತ್ಪಾದನಾ ಬಹುಮಾನಗಳು) ಯನ್ನು ರಾಜ್ಯದ ರೈತರಲ್ಲಿ ಹೆಚ್ಚಿನ ಉತ್ಪಾದನೆ ಮಾಡುವ ಮನೋಭಾವ ಉಂಟುಮಾಡಲು ತಾಲ್ಲೂಕುಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಇಳುವರಿ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ನೀಡಲಾಗುತ್ತಿದೆ. ಕೃಷಿ ಪಂಡಿತ್ ಪ್ರಶಸ್ತಿಯನ್ನು ಕೃಷಿ ಕ್ಷೇತ್ರದಲ್ಲಿ ಅಮೂಲ್ಯ ಅನ್ವೇಷಣೆ ಹಾಗೂ ಸೃಜನಾತ್ಮಕ ಕಾರ್ಯಗಳನ್ನು ಕೈಗೊಂಡ ಒಟ್ಟು 8 ಮಹನೀಯರುಗಳನ್ನು ಗುರುತಿಸಿ ಅವರುಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ.

9. **ಸಾವಯವ ಕೃಷಿ :**

ಈ ಯೋಜನೆಯಡಿ ಸಾವಯವ ಗ್ರಾಮ ಯೋಜನೆ, ತಾಲ್ಲೂಕು ಮಟ್ಟ, ರಾಷ್ಟ್ರೀಯ/ಅಂತರರಾಷ್ಟ್ರೀಯ ಸಾವಯವ ವಾಣಿಜ್ಯ ಮೇಳ, ವಸ್ತು ಪ್ರದರ್ಶನ, ವಿಚಾರ ಸಂಕಿರಣ, ಕಾರ್ಯಗಾರ, ಸಿಂಪೋಸಿಯಂ, ತರಬೇತಿ, ಹಸಿರೆಲೆ ಗೊಬ್ಬರ ಬೀಜ ವಿತರಣೆ, ಎರೆಹುಳು ಗೊಬ್ಬರ ತಯಾರಿಕಾ ಘಟಕ ಸ್ಥಾಪನೆ, ದ್ರವರೂಪದ ಸಾವಯವ ಗೊಬ್ಬರ ಉತ್ಪಾದನೆ ಹಾಗೂ ಬಯೋ ಡೈಜೆಸ್ಟರ್ ಸ್ಥಾಪನೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

10. ನೂತನ ಕೃಷಿ ಉತ್ತೇಜನ ಯೋಜನೆ :

ಈ ಯೋಜನೆಯಡಿ ರೈತರಿಗೆ ಕೃಷಿ ಯಾಂತ್ರೀಕರಣದಲ್ಲಿ ಹೈಟೆಕ್ ಕೃಷಿ ಯಂತ್ರೋಪಕರಣ, ಸಣ್ಣ ಟ್ರಾಕ್ಟರ್, ಪವರ್ ಟಿಲ್ಲರ್, ಡೀಸೆಲ್ ಪಂಪು ಸೆಟ್ಟು, ಟ್ರಾಕ್ಟರ್ /ಟಿಲ್ಲರ್ ಮೌಂಟೆಡ್ ಸ.ಸಂ.ಉಪಕರಣಗಳು, ನವೀಣ ಕೃಷಿ ಯಂತ್ರೋಪಕರಣಗಳನ್ನು ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ ಹಾಗೂ ಕೃಷಿ ಸಂಸ್ಕರಣೆ ಕಾರ್ಯಕ್ರಮದಡಿ ಕೃಷಿ ಸಂಸ್ಕರಣೆ ಬಗ್ಗೆ ರೈತರಿಗೆ ತರಬೇತಿ, ಕಣ ನಿರ್ಮಾಣ ಹಾಗೂ ರಿಯಾಯಿತಿ ದರದಲ್ಲಿ ಕೃಷಿ ಸಂಸ್ಕರಣೆ ಘಟಕಗಳನ್ನು ರೈತರಿಗೆ ಸಹಾಯಧನದಲ್ಲಿ ವಿತರಣೆ ಮಾಡಲಾಗುತ್ತಿದೆ.

11. ಜೈವಿಕ ಇಂಧನಗಳು :

ಈ ಯೋಜನೆಯಡಿ ರೈತರಿಗೆ ಜೈವಿಕ ಇಂಧನ ನೀಡುವ ಹಲವು ಮರಗಳಾದ ಹೊಂಗೆ, ಜತ್ರೋಫಾ, ಬೇವು ಮತ್ತು ಹಿಪ್ಪೆ ಮುಂತಾದವುಗಳನ್ನು ಬೆಳೆಸಿ ಬಂಜರು ಭೂಮಿಗಳನ್ನು ಉತ್ಪಾದನಾ ಘಟಕಗಳನ್ನಾಗಿ ಪರಿವರ್ತಿಸಲು ಪ್ರಚಾರ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

12. ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ಆತ್ಮಾ) – ಮಾದರಿ :

ಈ ಯೋಜನೆಯಡಿ ಕೃಷಿ ವಿಸ್ತರಣೆಯಲ್ಲಿ ತೊಡಗಿರುವ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು / ಇಲಾಖೆಗಳ ಮಧ್ಯೆ ಸಮನ್ವಯ ತರುವ ಮೂಲಕ ರೈತರಿಗೆ ಉತ್ತಮ ಗುಣಮಟ್ಟದ ವಿಸ್ತರಣಾ ಸೇವೆ ಮತ್ತು ನೂತನ ತಂತ್ರಜ್ಞಾನಗಳನ್ನು ಒದಗಿಸುವ ಕುರಿತು ಪ್ರಾತ್ಯಕ್ಷತೆ, ತರಬೇತಿಗಳು, ಅಧ್ಯಯನ ಪ್ರವಾಸಗಳು, ಇತ್ಯಾದಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

13. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :

ಈ ಯೋಜನೆಯಡಿ ಕರ್ನಾಟಕ ಕೃಷಿ ವಿಸ್ತರಣಾ ವ್ಯವಸ್ಥೆಯ ಪುನಃಶ್ಚೇತನ ಕಾರ್ಯಕ್ರಮ, ಕರ್ನಾಟಕ ಬೀಜ ಅಭಿಯಾನ ಕಾರ್ಯಕ್ರಮ, ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನ,

ಭೂಚೇತನ ಹಾಗೂ ರೈತರಿಗೆ ವಿವಿಧ ಸಂಸ್ಥೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

14. ಹಸಿರು ಹಬ್ಬ (ಕೃಷಿ ಮೇಳ) :

ಈ ಯೋಜನೆಯಡಿ ಕೃಷಿ ಇಲಾಖೆ ಮತ್ತು ಇತರೆ ಅಭಿವೃದ್ಧಿ ಇಲಾಖೆ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲು ಮತ್ತು ಹೊಸ ತಾಂತ್ರಿಕತೆಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಂಡೊಯ್ಯುವ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

15. ರೈತರ ಅಧ್ಯಯನ ಪ್ರವಾಸ :

ಈ ಯೋಜನೆಯಡಿ ರಾಜ್ಯದ ರೈತರಿಗೆ ಹೊರ ದೇಶಗಳ ಹವಾಮಾನ, ಬೆಳೆ ಪದ್ಧತಿಗಳು ಹಾಗೂ ಇತರೆ ವಿಷಯಗಳನ್ನು ಪರಿಚಯಿಸಲು ರೈತರಿಗೆ ವಿದೇಶಕ್ಕೆ ಕಳುಹಿಸುವ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

16. ಕೃಷಿ ಮಹಿಳೆಯರು ಮತ್ತು ಯುವಕರಿಗೆ ಕೃಷಿ ತರಬೇತಿಗಾಗಿ ಡಾನಿಡಾ ನೆರವಿನ ಯೋಜನೆ :

ಈ ಯೋಜನೆಯಡಿ ರೈತ ಮಹಿಳೆಯರಿಗೆ ಆಧುನಿಕ ಕೃಷಿ ಬಗ್ಗೆ ತರಬೇತಿ, ಮುಂದಾಳತ್ವ ಗುಣಗಳನ್ನು ಅಳವಡಿಸಲು ಸಹಕರಿಸುವುದು, ಉದ್ಯಮ ಶೀಲತೆಗೆ ಪ್ರೋತ್ಸಾಹ ನೀಡುವ ಮೂಲಕ ಸ್ವಾವಲಂಬಿಯಾಗಿಸುವುದು, ರೈತ ಮಹಿಳೆಯರಿಗೆ ವಿಶೇಷ ತರಬೇತಿ ಏರ್ಪಡಿಸುವ ಮೂಲಕ ಗುಂಪು ವಿಸ್ತರಣಾ ಚಟುವಟಿಕೆಯಲ್ಲಿ ನೆರವಾಗುವಂತೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

17. ಹೊಸ ಬೆಳೆ ವಿಮಾ ಯೋಜನೆ :

ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ಒದಗಿಸಲಾಗುವುದು, ಕೃಷಿಯಲ್ಲಿ ಪ್ರಗತಿಪರ ಬೇಸಾಯ ಪದ್ಧತಿಗಳನ್ನು, ಹೆಚ್ಚಿನ ಮೌಲ್ಯದ ಪರಿಕರಗಳನ್ನು ಉನ್ನತ ತಂತ್ರಜ್ಞಾನವನ್ನು

ಅಳವಡಿಸಿಕೊಳ್ಳಲು ರೈತರಿಗೆ ಪ್ರೋತ್ಸಾಹ ನೀಡುವುದು. ಕೃಷಿ ವರಮಾನವು ವಿಶೇಷವಾಗಿ ವಿಪತ್ತೊದಗಿದ ವರ್ಷಗಳಲ್ಲಿ ಸ್ಥಿರವಾಗಿರುವಂತೆ ಮಾಡಲು ನೆರವಾಗುವುದಕ್ಕೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

ಶೇಕಡ 3ರ ಬಡ್ಡಿದರದ ಸಾಲ ಸೌಲಭ್ಯ

510 (1015) ಶ್ರೀ ಹ್ಯಾರಿಸ್ ಎನ್ ಎ. (ಶಾಂತಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೇಕಡಾ 3ರ ಬಡ್ಡಿ ದರದ ಸಾಲ ಸೌಲಭ್ಯದ ವಿವರಗಳೇನು? ಈ ಯೋಜನೆಯಡಿ ನೀಡಿದ ಸಾಲದ ಒಟ್ಟು ಮೊತ್ತವೆಷ್ಟು?

ಆ) ಈ ಸಾಲ ಸೌಲಭ್ಯದ ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) ಘೋಷಿತ ಯೋಜನೆಯು ಸೂಕ್ತ ರೀತಿಯಲ್ಲಿ ಫಲಾನುಭವಿಗಳಿಗೆ ಲಭ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಈ ಯೋಜನೆಯಲ್ಲಿನ ಲೋಪದೋಷಗಳ ನಿವಾರಣೆಗಾಗಿ ಸರ್ಕಾರದ ಕ್ರಮಗಳೇನು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) 2008–09 ನೇ ಸಾಲಿನಿಂದ ಶೇಕಡ 3 ರ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ವಿತರಿಸಲಾಗಿದೆ. 2008–09ನೇ ಸಾಲಿನಲ್ಲಿ ರೂ.3576.98 ಕೋಟಿಗಳು ಹಾಗೂ 2009–10 ನೇ ಸಾಲಿನಲ್ಲಿ (ದಿ: 1–4–2009 ರಿಂದ 28–02–2010 ರವರೆಗೆ) ರೂ.3099.40 ಕೋಟಿಗಳನ್ನು ಕೃಷಿ ಸಾಲವನ್ನು ನೀಡಲಾಗಿದೆ. ಈ ಯೋಜನೆಯ ಮುಖ್ಯ ವಿವರಗಳು ಈ ಕೆಳಕಂಡಂತಿದೆ.

1) ಈ ಯೋಜನೆಯಡಿಯಲ್ಲಿ ಶೇ.3 ರ ಬಡ್ಡಿ ದರವು ದಿ: 1–4–2009 ರಿಂದ ವಿವಿಧ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಂದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ಪಡೆದಿರುವಂತಹ ರೈತರುಗಳಿಗೆ ಅನ್ವಯವಾಗುತ್ತದೆ.